# ವಿದ್ಯಾ ಸಂಸ್ಕಾರ್ ಪದವಿ ಪೂರ್ವ ಕಾಲೇಜು

## Vidya Sanskaar Pre-University College

**(Affiliated to Department of School Education, Pre-University)**

Machohalli Gate, Magadi Main Road, Bengaluru – 560091

Ph: 080-35612881 to 99 (19 Lines) Email: upasana@vidyasanskaar.edu.in, www. vidyasanskaar.edu.in

**U-DISE Code:** 29280203925 **College Code:** AN0660


# UPASANA -ಉಪಾಸನ - उपासना


## VOLUME - 02 | ISSUE -01 | JUNE 2026


UPASANA VSPUC



VOLUME - 02 | ISSUE -01 | JUNE 2026

# Table of Contents

1. Orientation Programme
   Igniting Young Minds for a Bright Future.
2. Best Manager
   Master the Challenge, Earn the Title.
3. Leadership Speaks
   Words of Wisdom, Vision for Tomorrow
4. Voices of Vision, Paths to Success.
   Inspiring Minds, Empowering Futures
5. Students Toppers
   Celebrating Excellence, Inspiring Future Achievers.
6. Gallery
   Moments Captured
7. Contact us
   Stay connected

# Meet Our Editorial Team...

Core Members:

1. Dr. Satish  M Bejjihally, CEO VSECT
2. Harshith Gowda S, EDL VSECT
3. Vinay G V, Principal
4. Shilpa T, Coordinator (Com. & Lang.)

Members:

1. Bhavya M K, Lecturer in English
2. Gangaraju D, Lecturer in Kannada
3. Julio Sterlin J S, Lecturer in Computer Science
4. Rajesha H N, Lecturer in Hindi
5. Thippeswamy, Librarian
6. Lavanya B T, Lecturer in Business Studies
7. Rushika L, Lecturer in Business Studies
8. Bhoomika R M, FDA
9. Sushma, FDA

# Orientation Programme






The Orientation Programme for the I PUC students marked the beginning of an exciting academic journey at Vidya Sanskaar Pre-University College. The programme was designed to warmly welcome the students and familiarize them with the college's vision, values, expectations, and opportunities.

The session provided valuable insights into academics, discipline, career planning, co-curricular activities, and student support systems. Vidya Sanskaar inspired the students to dream big, stay focused, and make the most of their two years in PUC.

The programme served as a bridge between school life and higher education, helping students step into the new phase with confidence and enthusiasm. It encouraged them to embrace challenges, develop leadership qualities, and strive for excellence in every endeavour.

Every great achievement begins with the courage to take the first step. The Orientation Programme was that first step towards a future filled with learning, growth, and success.

"New Faces, New Dreams, New Beginnings – Igniting Young Minds for a Bright Future."

# The Best Manager Event

Department of business studies organized "The Best Manager" Competition, a prestigious event designed to identify and nurture managerial, entrepreneurial, and leadership skills among students. The competition consisted of four challenging rounds, testing participants on their knowledge, creativity, decision-making abilities, and leadership potential.




**Round 1: Think Bots - 13/05/2026**

The first round, Think Bots, was an individual pen-and-paper test comprising 20 multiple-choice questions (MCQs). The questions were based on the students' syllabus in Accountancy, Economics, and Business Studies. A total of 34 participants took part in this round, out of which 24 students qualified for the next stage based on their performance.

**Round 2: Mind Frizz - 15/05/2026**

The second round, Mind Frizz, was a team-based competition. The 24 qualified students were divided into 6 teams, with each team consisting of 4 members. This round featured three exciting sub-rounds:

- Sub-Round 1: Vibe Check

Teams participated in an interactive knowledge-based challenge. No eliminations took place during this stage.

- Sub-Round 2: Quiz Kalifa

This was a buzzer-based quiz round focusing on topics related to Commerce, Business, Banking, and Management. At the end of this round, the two teams with the lowest scores were eliminated, reducing the competition to four teams.




- Sub-Round 3: Melodrama

A rapid-fire round that tested the participants quick thinking and subject knowledge. Following this round, only two teams (8 students) advanced to the next stage.

**Round 3: Shark Tank (Semi-Final) 18/05/2026**

The 8 qualified students competed individually in the semi-final round titled Shark Tank. Participants were required to present innovative business ideas, products, or services before a panel of judges. Their presentations were evaluated based on creativity, feasibility, problem-solving ability, and entrepreneurial vision.



After careful evaluation, the best four ideas were selected for the final round. The finalists were:

- Rakshaa S – II B
- Lakshitha V – II B
- Ullas G – II A
- Chandana G– II B

**Round 4: Hot Seat (Final)**

The final round, Hot Seat, was designed as a stress interview. The four finalists faced a panel of faculty members who assessed their confidence, communication skills, decision-making abilities, presence of mind, and leadership qualities under pressure. Last round will be held in next month.

The Best Manager Competition provided an excellent platform for students to showcase their academic knowledge, leadership qualities, teamwork, entrepreneurial thinking, and managerial skills. The event was a grand success, encouraging participants to develop confidence, innovation, and professional competencies essential for future careers in management and business.

# ಪರಿಸರ ಹಾನಿಯಿಂದ ಉಂಟಾಗುವ ದುಷ್ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟುವ ಬಗ್ಗೆ



ನಲ್ಮೆಯ ವಿದ್ಯಾರ್ಥಿಗಳೇ, ಪರಿಸರವೆಂದರೆ ನಮ್ಮ ಸುತ್ತಲಿನ ಜಗತ್ತು ನಾವು ವಾಸಿಸುವ ಭೂಮಿ, ನದಿ, ಸರೋವರ, ಸಾಗರ, ಸಮುದ್ರ, ವಾಯುಮಂಡಲ, ಇಡೀ ಸಸ್ಯ ಸಂಕುಲ, ಪ್ರಾಣಿ ಪಕ್ಷಿ ಸಂಪತ್ತು ಮತ್ತು ಮಾನವ ಸಮೂಹ ಇವು ಪರಿಸರದ ಅಂಗಗಳು. ಮಾನವ ಇದರ ಮುಖ್ಯ ಅಂಗವಾಗಿದ್ದು ಅವನೇ ಇಂದು ಪರಿಸರ ಹಾನಿಗೆ ಮುಖ್ಯ ಕಾರಣಕರ್ತನಾಗಿದ್ದಾನೆ. ಮಾನವ ತನ್ನ ಸುಖಕ್ಕಾಗಿ ಆರ್ಥಿಕ ಸವಲತ್ತಿಗಾಗಿ ಸ್ಥಾಪಿಸಿದ ಕೈಗಾರಿಕೆಗಳು, ತಯಾರಿಸಿದ ವಾಹನಗಳು, ಆಹಾರ ಉತ್ಪಾದನೆಗಾಗಿ ಬಳಸಿದ ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳು ಹಾಗೂ ಮನರಂಜನೆಗಾಗಿ ಉಪಯೋಗಿಸುತ್ತಿರುವ ಧ್ವನಿವರ್ಧಕಗಳು ಪರಿಸರದ ನಾಶಕ್ಕೆ ಮುಖ್ಯ ಕಾರಣವಾಗುತ್ತಿವೆ .

**ವಾಯು ಮಾಲಿನ್ಯ** : ಮಾನವ ಉಸಿರಾಡಲು ಗಾಳಿ ಅತ್ಯಗತ್ಯ. ಗಾಳಿ ಇಲ್ಲದೆ ಕೆಲವು ಗಂಟೆಗಳ ಕಾಲ ಮಾನವ ಬದುಕಲು ಸಾಧ್ಯವಿಲ್ಲ. ಈಗ ಶುದ್ಧ ಗಾಳಿ ದೊರೆಯದೆ ಭೀಕರ ಸ್ಥಿತಿ ಬಂದಿದೆ. ನಮ್ಮ ರಸ್ತೆಗಳಲ್ಲಿ ಸಂಚರಿಸುವ ಬಹುತೇಕ ವಾಹನಗಳು ಉಪಯೋಗಿಸುವ ಇಂಧನಗಳಾದ ಪೆಟ್ರೋಲ್ ಮತ್ತು ಡೀಸೆಲ್ ಪಳೆಯುಳಿಕೆ ಇಂಧನಗಳಾಗಿದ್ದು ಇವುಗಳ ಉರಿಯುವಿಕೆಯಿಂದ ಹೆಚ್ಚು ಇಂಗಾಲದ ಡೈ ಆಕ್ಸೈಡ್ ಮತ್ತು ಇಂಗಾಲದ ಮಾನೋ ಆಕ್ಸೈಡ್ ಅನಿಲಗಳು ಬಿಡುಗಡೆಯಾಗುತ್ತಿದ್ದು, ಇದಲ್ಲದೆ ಮಾನವ ದಿನನಿತ್ಯ ಬಳಸುವ ವಸ್ತುಗಳಾದ ರಬ್ಬರ್, ಪ್ಲಾಸ್ಟಿಕ್, ಪೇಪರ್ ಮತ್ತು ಕಸ ಕಡ್ಡಿಗಳನ್ನು ದಾರಿಯಲ್ಲಿ ಸುಡುವುದರಿಂದ, ನಮ್ಮ ಸುತ್ತ ಇರುವ ಕೈಗಾರಿಕೆಗಳಿಂದ ಮತ್ತು ಶಾಖ ವಿದ್ಯುಕೇಂದ್ರಗಳಲ್ಲಿ ಉಪಯೋಗಿಸುವ ಕಲ್ಲಿದ್ದಲನ್ನು ಸುಡುವುದರಿಂದ ಮೇಲಿನ ಹಾನಿಕಾರಕ ಅನಿಲಗಳು ಬಹಳ ಪ್ರಮಾಣದಲ್ಲಿ ಬಿಡುಗಡೆಯಾಗುತ್ತಿದ್ದು ನಾವು ವಾಯು ಮಾಲಿನ್ಯ ಎದುರಿಸುವ ಸ್ಥಿತಿ ಬಂದಿದೆ.

ಇದನ್ನು ತಡೆಯಬೇಕಾದರೆ ಪಳೆಯುಳಿಕೆ ಇಂಧನದಿಂದ ಓಡುವ ವಾಹನಗಳ ಬದಲಾಗಿ ಸೈಕಲ್ ಗಳು, ವಿದ್ಯುತ್ ವಾಹನಗಳನ್ನು ಹೆಚ್ಚಾಗಿ ಬಳಸಬೇಕು. ಕಾರ್ಖಾನೆಗಳಲ್ಲಿ ಹಾನಿಕಾರಕ ಅನಿಲಗಳು ಚಿಮಣಿಗಳ ಮೂಲಕ ಹೊರ ಬರದಂತೆ ವ್ಯವಸ್ಥೆ ಮಾಡಿ ತಡೆಯಬೇಕು. ರಸ್ತೆ ಬದಿಯಲ್ಲಿ ಕಸ ಕಡ್ಡಿ, ಪ್ಲಾಸ್ಟಿಕ್ ,ಪೇಪರ್ ಸುಡುವುದನ್ನು ನಿಲ್ಲಿಸಬೇಕು. ವಾಹನಗಳಲ್ಲಿ ಎಥೆನಾಲ್, ಜಲಜನಕ ಇಂಧನಗಳನ್ನು ಹೆಚ್ಚಾಗಿ ಬಳಸಬೇಕು.

**ಜಲ ಮಾಲಿನ್ಯ** : ಪರಿಸರದ ಮತ್ತೊಂದು ಅತ್ಯಮೂಲ್ಯವಾದ ವಸ್ತು ನೀರು ನಾವು ನಮ್ಮ ದೈಹಿಕ ಅಗತ್ಯಗಳಿಗಲ್ಲದೆ ನೀರನ್ನು ವಿದ್ಯುತ್ ಶಕ್ತಿ ಉತ್ಪಾದಿಸಲು, ವಾಹನಗಳಲ್ಲಿ, ಯಂತ್ರಗಳಲ್ಲಿ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ಬಳಸುತ್ತಿದ್ದೇವೆ. ಈ ಎಲ್ಲಾ ಹಲವಾರು ರೀತಿಯಲ್ಲಿ ಬಳಕೆಯಾಗುತ್ತಿರುವ ಶುದ್ಧ ನೀರು ಮಲಿನವಾಗುತ್ತಿದೆ. ಇದನ್ನು ಜಲಮಾಲಿನ್ಯ ಎನ್ನುತ್ತೇವೆ. ವ್ಯವಸಾಯಕ್ಕೆ ಉಪಯೋಗಿಸುವ ಅನೇಕ ರೀತಿಯ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಮಳೆ ನೀರಿನ ಮೂಲಕ ಈ ಕಲ್ಮಶಗಳನ್ನು ನದಿ ಮತ್ತು ಕೆರೆ ಸಮುದ್ರಗಳಿಗೆ ಸೇರಿಸುತ್ತಿದೆ. ಹೀಗಾಗಿ ಜಲಚರ ಪ್ರಾಣಿಗಳಲ್ಲದೆ ಮಾನವನ ಬಹುತೇಕ ಖಾಯಿಲೆಗಳಿಗೆ ಕಾರಣವಾಗುತ್ತಿದೆ ಪ್ರಮುಖವಾಗಿ ಕಾಲರ, ಖಾಮಲೆ ರೋಗ, ವಾಂತಿ, ಬೇದಿ ಮುಂತಾದ ರೋಗಗಳು ಮನುಷ್ಯ ಸಂಕುಲಕ್ಕೆ ಬರುತ್ತಿವೆ. ಈ ಕಾರಣದಿಂದ ಜಲ ಮಾಲಿನ್ಯ ಕಡಿಮೆ ಮಾಡಲು ನಮ್ಮ ಬೆಳೆಗಳಿಗೆ ರಾಸಾಯನಿಕ ಗೊಬ್ಬರಗಳನ್ನು ಬಳಸುವುದನ್ನು ತಪ್ಪಿಸಿ ಜೈವಿಕ ರಸಗೊಬ್ಬರ ಬಳಸಬೇಕು. ಕೀಟನಾಶಕ ಸಿಂಪಡಿಸುವುದನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಬೇಕು .

## ಪರಿಸರ ಹಾನಿಯಿಂದ ಉಂಟಾಗುವ ದುಷ್ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟುವ ಬಗ್ಗೆ

**ಶಬ್ಧ ಮಾಲಿನ್ಯ** : ನಮ್ಮ ಕಿವಿಗಳಿಗೆ ಬೀಳುವ ಶಬ್ಧದ ತೀವ್ರತೆ ಬಹಳ ಕಡಿಮೆ ಇರಬೇಕು. ಅದು 70 ಡಿಬಿಗಳಿಗಿಂತ ಹೆಚ್ಚು ಇರಬಾರದು. ಇದಕ್ಕಿಂತ ಹೆಚ್ಚಾದರೆ ಕಿವಿಯ ಪೊರೆಯ ಮೇಲೆ ಆಘಾತವಾಗಿ ಕಿವಿ ಕೇಳಿಸದಂತಾಗುತ್ತದೆ. ಸಾಂಸ್ಕೃತಿಕ ಸಮಾರಂಭಗಳಲ್ಲಿ, ದೇವಸ್ಥಾನಗಳಲ್ಲಿ, ವಾಹನಗಳಲ್ಲಿ ಶಬ್ಧ 70 ಡಿಬಿಗಳಿಗಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಹೀಗಾಗಿ ದೊಡ್ಡ ದೊಡ್ಡ ಕೈಗಾರಿಕೆಗಳಿಂದ, ವಿಮಾನ ನಿಲ್ದಾಣಗಳಿಂದ, ರೈಲ್ವೆ , ವಾಹನಗಳ ರಸ್ತೆಗಳಿಂದ ನಾವು ವಾಸಿಸುವ ಮನೆಗಳು ದೂರವಿದ್ದರೆ ಒಳಿತು.

**ವಿಕಿರಣ ಮಾಲಿನ್ಯ** : ನಾವು ಕೆಲವು ಖಾಯಿಲೆಗಳ ಪರೀಕ್ಷೆಗಳಿಗಾಗಿ ವೈದ್ಯಕೀಯ ಪರೀಕ್ಷಾ ಕೇಂದ್ರಗಳಿಗೆ ಹೋದಾಗ ಕ್ಷಕಿರಣ ಪರೀಕ್ಷೆಗೆ ಮೈ ಒಡ್ಡಬೇಕಾಗುತ್ತದೆ ಅದಲ್ಲದೆ ಕೆಲವು ದಿವಸ ಸೂರ್ಯನ ತಾಪ ಹೆಚ್ಚಾಗಿದ್ದಾಗ ಅದರಲ್ಲಿ ಅತಿಯಾದ ನೇರಳೆ ಕಿರಣಗಳಿಗೆ ನಾವು ನಮ್ಮ ದೇಹವನ್ನು ಒಡ್ಡಬೇಕಾಗುತ್ತದೆ ಆಗ ಮೈ ಬಣ್ಣ ಕಪ್ಪಾಗುತ್ತದೆ ಇದಲ್ಲದೆ ಕೆಲವು ಬೀಜಾಣು ರಿಯಾಕ್ಟರ್ ವಿದ್ಯುತ್ ಉತ್ಪಾದನೆಗೆ ಬಳಸುತ್ತಿದ್ದಾರೆ ಉದಾಹರಣೆಗೆ ನಮ್ಮ ಕರ್ನಾಟಕದ ಕೈಗಾ ವಿದ್ಯುತ್ ಉತ್ಪಾದನೆ ಕೇಂದ್ರ. ಅದರಿಂದ ಹಾನಿಕಾರಕ ವಿಕಿರಣಗಳಾದ ಗ್ಯಾಮಕಿರಣಗಳು ಹೊರ ಸೂಸುತ್ತವೆ. ಇವು ನಮ್ಮ ದೇಹಕ್ಕೆ ತಗುಲಿದರೆ ಚರ್ಮದ ಕ್ಯಾನ್ಸರ್, ರಕ್ತದ ಕ್ಯಾನ್ಸರ್, ಗರ್ಭಿಣಿ ಸ್ತ್ರೀಯರಿಗೆ ತಗುಲಿದರೆ ಹುಟ್ಟುವ ಮಗುವಿಗೆ ಅಂಗವಿಕಲತೆ ಮತ್ತು ದೃಷ್ಟಿ ದೋಷಗಳು ಕಂಡುಬರುತ್ತವೆ. ಇದನ್ನು ತಡೆಯಲು ನಾವು ಯಾವುದೇ ಕಾರಣಕ್ಕೂ ಕ್ಷಕಿರಣ ಪರೀಕ್ಷಾ ಕೇಂದ್ರದಿಂದ ದೂರವಿರಬೇಕು ಮತ್ತು ಬೀಜಾಣು ರಿಯಾಕ್ಟರ್ ಗಳಿಂದ ಬಹಳ ದೂರವಾಸಿಸಬೇಕು.

ಮೇಲಿನ ರೀತಿಯ ಎಲ್ಲಾ ಎಚ್ಚರಿಕೆ ಕ್ರಮಗಳನ್ನು ನಾವು ಅಳವಡಿಸಿಕೊಂಡರೆ ನಮ್ಮ ದೈಹಿಕ ಆರೋಗ್ಯ ಸುಸ್ಥಿರವಾಗಿರುತ್ತದೆ. ನಾವು ಹೆಚ್ಚು ದಿನ ಆರೋಗ್ಯವಂತರಾಗಿ ಬದುಕುತ್ತೇವೆ.

**ಎಂ. ಕೆ .ರಾಮಸ್ವಾಮಿ**
**ಶೈಕ್ಷಣಿಕ ನಿರ್ದೇಶಕರು**
**ವಿದ್ಯಾ ಸಂಸ್ಕಾರ್ ಶಿಕ್ಷಣ ಸಂಸ್ಥೆ, ಬೆಂಗಳೂರು**



**Dear Students, Parents, and the Vidya Sanskaar Family,**

It brings me immense joy to welcome you to this milestone edition of Upasana (Volume II, Issue 1). Completing one full year of publication and stepping confidently into our second stands as a beautiful testament to our collective growth, shared stories, and the enduring values that define Vidya Sanskaar Educational Institutions.

This moment is a celebration of you—the incredible community that breathes life into our campus every single day.

To our I and II PUC students, you stand at a defining crossroads where academic focus must marry holistic development. We urge you to look beyond the textbook, leverage our structured learning frameworks designed to manage your cognitive load, and utilize our campus, sports, and resource interactions to paint your canvas with resilience.

This educational journey is a collaborative matrix. We are deeply grateful to our parents for their irreplaceable support and trust as we work together to secure both the academic progress and emotional well-being of our students.

Our vibrant culture is sustained by its people:

- Our Exceptional Faculty: Who have transitioned from rigid vertical structures to innovative pedagogy that turns classrooms into hubs of critical thinking.
- Our Dedicated Staff: Our non-teaching and administrative teams who ensure absolute operational speed, seamless parent interaction, and pristine campus management.

Together, your commitment to high institutional hospitality forms our very bedrock.

As we expand our infrastructure, including our state-of-the-art institutional auditorium, we remain anchored in building an inclusive, high-performing ecosystem where academic success and social responsibility go hand in hand.

**Best wishes,**

**Dr. Satish M Bejjihally**

**PhD, M.Phil, M.Sc, B.Ed, MBA (Edu), PGDEAS**

**CEO, Vidya Sanskaar Educational Institutions**

## ವಿದ್ಯಾರ್ಥಿ ಜೀವನದ ಮೌಲ್ಯಗಳು



ವಿದ್ಯಾರ್ಥಿ ಜೀವನವು ಮಾನವನ ಭವಿಷ್ಯದ ಭದ್ರಬುನಾದಿಯಾಗಿದೆ. ಇದು ಪುಸ್ತಕದ ಜ್ಞಾನವನ್ನು ಪಡೆಯುವ ಜೊತೆ ಜೊತೆಗೆ ಶಿಸ್ತು, ಸಂಸ್ಕಾರ, ಕಠಿಣ ಪರಿಶ್ರಮ ಮತ್ತು ಸಮಾಜಮುಖಿ ಮೌಲ್ಯಗಳನ್ನು ಕಲಿಯುವ ಅವಕಾಶವಾಗಿದೆ. ಈ ಹಂತದಲ್ಲಿ ಅಳವಡಿಸಿಕೊಳ್ಳುವ ಅಭ್ಯಾಸಗಳು ವ್ಯಕ್ತಿ ಇಡೀ ಜೀವನದ ಯಶಸ್ಸು ಮತ್ತು ನಡವಳಿಕೆಯನ್ನು ನಿರ್ಧರಿಸುತ್ತದೆ.

ವಿದ್ಯಾರ್ಥಿ ಜೀವನದ ಮಹತ್ವವನ್ನು ಈ ಕೆಳಗಿನ ಅಂಶಗಳ ಮೂಲಕ ಅರಿಯಬಹುದಾಗಿದೆ.

**ಭವಿಷ್ಯಕ್ಕೆ ಅಡಿಪಾಯ :** ವಿದ್ಯಾರ್ಥಿ ಜೀವನವನ್ನು ಮಾನವನ ಜೀವನದ ಬಿತ್ತುವ ಕಾಲ ಎಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಕಲಿಯುವ ಪಾಠ ಹಾಗೂ ಜ್ಞಾನವು ಭವಿಷ್ಯದ ವೃತ್ತಿ ಜೀವನಕ್ಕೆ ದಾರಿದೀಪವಾಗುತ್ತದೆ .

**ಶಿಸ್ತು ಮತ್ತು ಸಮಯ ಪಾಲನೆ :** ಶಿಸ್ತು ಎನ್ನುವುದು ವಿದ್ಯಾರ್ಥಿ ಜೀವನದ ಬೆನ್ನೆಲುಬು ಸಮಯಕ್ಕೆ ಸರಿಯಾಗಿ ಅಂದಿನ ಪಾಠಗಳ ಓದು ಹಾಗೂ ನಿಗದಿತ ಸಮಯದಲ್ಲಿ ಕೆಲಸಗಳನ್ನು ಮುಗಿಸುವುದರಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ.

**ಕಠಿಣ ಪರಿಶ್ರಮ ಮತ್ತು ಸವಾಲುಗಳನ್ನು ಎದುರಿಸುವುದು :** ವಿದ್ಯಾರ್ಥಿ ದೆಸೆಯಲ್ಲಿ ಎದುರಾಗುವ ಪರೀಕ್ಷೆಗಳು ಮತ್ತು ಅಧ್ಯಯನದ ಸವಾಲುಗಳು ವ್ಯಕ್ತಿಯನ್ನು ಮಾನಸಿಕವಾಗಿ ಸದೃಢರನ್ನಾಗಿ ಮಾಡುತ್ತವೆ. ಇದು ಭವಿಷ್ಯದಲ್ಲಿ ಎದುರಾಗುವ ಕಷ್ಟಗಳನ್ನು ಮತ್ತು ಸವಾಲುಗಳನ್ನು ಎದುರಿಸಲು ಸಹಾಯಕವಾಗುತ್ತದೆ.

**ಜ್ಞಾನಾರ್ಜನೆ ಮತ್ತು ಕುತೂಹಲ :** ಈ ಹಂತದಲ್ಲಿ ಕಲಿಯುವ ಹೊಸ ವಿಷಯ ಮತ್ತು ಓದುವ ಹವ್ಯಾಸದಿಂದ ಮೆದುಳಿನ ಬೆಳವಣಿಗೆ ಮತ್ತು ವಿಷಯದ ಅಗಾದತೆ ಅರಿಯಲು ಅವಶ್ಯಕವಾಗಿದೆ.

“**ಇಂದಿನ ವಿದ್ಯಾರ್ಥಿಯೇ ನಾಡಿನ ದೇಶದ ಉತ್ತಮ ಪ್ರಜೆ**” ಹೀಗಾಗಿ ಈ ಸಮಯದಲ್ಲಿ ಸಿಗುವ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಜ್ಞಾನ ಮತ್ತು ಶಿಸ್ತು ಬೆಳೆಸಿಕೊಂಡು ದೇಶದ ಹಾಗೂ ಸಮಾಜದ ಕುಟುಂಬದ ಬೆಳವಣಿಗೆಗೆ ಸಹಕಾರಿಯಾಗಬಹುದು.

**ತಿಪ್ಪೇಸ್ವಾಮಿ**
**ಗ್ರಂಥ ಪಾಲಕರು**
**ವಿದ್ಯಾ ಸಂಸ್ಕಾರ್ ಪದವಿ ಪೂರ್ವ ಕಾಲೇಜು, ಬೆಂಗಳೂರು**

VOLUME - 02 | ISSUE -01 | JUNE 2026

# ಪಿಯುಸಿ ಮಟ್ಟದ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾಕಲಿಕೆಯು ಕಷ್ಟದಾಯಕವಾಗಿದೆ ಇದಕ್ಕೆ ಕಾರಣ ಮತ್ತು ಪರಿಹಾರ

ಪಿಯುಸಿ ಮಟ್ಟದ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕಲಿಕೆ ಕಷ್ಟದಾಯಕವಾಗುತ್ತಿರುವುದಕ್ಕೆ ಹಲವು ಕಾರಣಗಳಿವೆ. ಅವುಗಳನ್ನು ಅರ್ಥಮಾಡಿಕೊಂಡು ಸೂಕ್ತ ಪರಿಹಾರಗಳನ್ನು ಅನುಸರಿಸಿದರೆ ಕಲಿಕೆಯನ್ನು ಸುಲಭಗೊಳಿಸಬಹುದು.

**ಕಾರಣಗಳು**

**1. ಭಾಷಾ ಪರಿಸರದ ಕೊರತೆ**

ವಿದ್ಯಾರ್ಥಿಗಳು ದೈನಂದಿನ ಜೀವನದಲ್ಲಿ ಕನ್ನಡವನ್ನು ಕಡಿಮೆ ಬಳಸುತ್ತಾರೆ. ಮನೆ ಮತ್ತು ಶಾಲೆ, ಕಾಲೇಜುಗಳಲ್ಲಿ ಇಂಗ್ಲಿಷ್ ಅಥವಾ ಇತರ ಭಾಷೆಗಳ ಪ್ರಭಾವ ಹೆಚ್ಚಾಗಿದೆ.

**2. ವ್ಯಾಕರಣದ ಸಂಕೀರ್ಣತೆ**

ಕನ್ನಡ ವ್ಯಾಕರಣದ ನಿಯಮಗಳು, ಸಮಾಸ, ಸಂಧಿ, ಅಲಂಕಾರಗಳು ಮುಂತಾದ ವಿಷಯಗಳು ಕೆಲವರಿಗೆ ಕಠಿಣವೆನಿಸುತ್ತವೆ.

**3. ಓದುವ ಅಭ್ಯಾಸದ ಕೊರತೆ**

ಕನ್ನಡ ಪತ್ರಿಕೆಗಳು, ಕಥೆಗಳು, ಕಾದಂಬರಿಗಳು ಹಾಗೂ ಸಾಹಿತ್ಯ ಕೃತಿಗಳನ್ನು ಓದುವ ಅಭ್ಯಾಸ ಕಡಿಮೆಯಾಗಿದೆ.

**4. ಬೋಧನಾ ವಿಧಾನಗಳ ಮಿತಿಗಳು**

ಕೆಲವು ಸಂದರ್ಭಗಳಲ್ಲಿ ಪಾಠಗಳು ಕೇವಲ ಪರೀಕ್ಷಾ ದೃಷ್ಟಿಯಿಂದ ಬೋಧನೆಯಾಗುತ್ತವೆ. ಚಟುವಟಿಕೆ ಆಧಾರಿತ ಕಲಿಕೆಗೆ ಕಡಿಮೆ ಅವಕಾಶ ದೊರೆಯುತ್ತದೆ.

**5. ಡಿಜಿಟಲ್ ಮಾಧ್ಯಮಗಳ ಪ್ರಭಾವ**

ಸಾಮಾಜಿಕ ಜಾಲತಾಣಗಳು ಮತ್ತು ಆನ್‌ಲೈನ್ ವಿಷಯಗಳು ಹೆಚ್ಚಾಗಿ ಇಂಗ್ಲಿಷ್‌ನಲ್ಲಿ ಲಭ್ಯವಿರುವುದರಿಂದ ಕನ್ನಡ ಬಳಕೆ ಕಡಿಮೆಯಾಗುತ್ತದೆ.

**6. ಪದಸಂಪತ್ತಿನ ಕೊರತೆ**

ಹೊಸ ಪದಗಳ ಅರ್ಥ ತಿಳಿಯದಿರುವುದು ಪಾಠದ ಗ್ರಹಿಕೆಗೆ ಅಡ್ಡಿಯಾಗುತ್ತದೆ.

**ಪರಿಹಾರಗಳು**

**1. ಕನ್ನಡ ಬಳಕೆಯನ್ನು ಹೆಚ್ಚಿಸುವುದು**

ಮನೆ, ಶಾಲೆ, ಕಾಲೇಜು ಮತ್ತು ಸ್ನೇಹಿತರೊಂದಿಗೆ ಕನ್ನಡದಲ್ಲಿ ಮಾತನಾಡಲು ಪ್ರೋತ್ಸಾಹಿಸಬೇಕು.

**2. ಓದುವ ಅಭ್ಯಾಸ ಬೆಳೆಸುವುದು**

ಪ್ರತಿದಿನ ಕನ್ನಡ ಪತ್ರಿಕ, ಕಥೆ, ಲೇಖನ ಅಥವಾ ಸಾಹಿತ್ಯ ಕೃತಿಗಳನ್ನು ಓದುವಂತೆ ಪ್ರೇರೇಪಿಸಬೇಕು.

**3. ಆಧುನಿಕ ಬೋಧನಾ ವಿಧಾನಗಳನ್ನು ಅಳವಡಿಸುವುದು**

ಚರ್ಚೆ, ಪಾತ್ರಾಭಿನಯ, ಗುಂಪು ಕಾರ್ಯ, ಭಾಷಾ ಆಟಗಳು ಮುಂತಾದ ಚಟುವಟಿಕೆಗಳ ಮೂಲಕ ಕಲಿಸಬೇಕು.

**4. ತಂತ್ರಜ್ಞಾನ ಬಳಕೆ**

ಕನ್ನಡ ಶೈಕ್ಷಣಿಕ ವಿಡಿಯೋಗಳು, ಆಡಿಯೋ ಪುಸ್ತಕಗಳು ಹಾಗೂ ಡಿಜಿಟಲ್ ಕಲಿಕಾ ಸಂಪನ್ಮೂಲಗಳನ್ನು ಬಳಸಬೇಕು.

**5. ಪದಸಂಪತ್ತಿನ ವೃದ್ಧಿ**

ಪ್ರತಿದಿನ ಹೊಸ ಪದಗಳನ್ನು ಕಲಿಯುವ ಮತ್ತು ಅವುಗಳನ್ನು ವಾಕ್ಯಗಳಲ್ಲಿ ಬಳಸುವ ಅಭ್ಯಾಸ ಬೆಳೆಸಬೇಕು.

VOLUME - 02 | ISSUE -01 | JUNE 2026

# ಪಿಯುಸಿ ಮಟ್ಟದ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾಕಲಿಕೆಯು ಕಷ್ಟದಾಯಕವಾಗಿದೆ ಇದಕ್ಕೆ ಕಾರಣ ಮತ್ತು ಪರಿಹಾರ

**6. ಭಾಷೆಯ ಮೇಲೆ ಆಸಕ್ತಿ ಮೂಡಿಸುವುದು**

ಕನ್ನಡ ಸಾಹಿತ್ಯ, ನಾಟಕ, ಕಾವ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಭಾಷೆಯ ಸೌಂದರ್ಯವನ್ನು ಪರಿಚಯಿಸಬೇಕು.

ಪಿಯುಸಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕಲಿಕೆ ಕಷ್ಟದಾಯಕವಾಗಲು ಭಾಷಾ ಬಳಕೆಯ ಕೊರತೆ, ವ್ಯಾಕರಣದ ಸಂಕೀರ್ಣತೆ, ಓದುವ ಅಭ್ಯಾಸದ ಅಭಾವ ಮತ್ತು ಬೋಧನಾ ವಿಧಾನಗಳ ಮಿತಿಗಳು ಪ್ರಮುಖ ಕಾರಣಗಳಾಗಿವೆ. ವಿದ್ಯಾರ್ಥಿ-ಶಿಕ್ಷಕ-ಪೋಷಕರ ಸಹಕಾರದಿಂದ ಕನ್ನಡದ ಬಳಕೆ ಮತ್ತು ಅಭ್ಯಾಸವನ್ನು ಹೆಚ್ಚಿಸಿದರೆ ಭಾಷಾ ಕಲಿಕೆ ಸುಲಭ, ಪರಿಣಾಮಕಾರಿ ಮತ್ತು ಆಸಕ್ತಿದಾಯಕವಾಗುತ್ತದೆ.

**ಕನ್ನಡ ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿ, ಶಿಕ್ಷಕ, ಮತ್ತು ಪೋಷಕರ ಪಾತ್ರ**.

ಕನ್ನಡ ಭಾಷಾ ಕಲಿಕೆ ಯಶಸ್ವಿಯಾಗಲು ವಿದ್ಯಾರ್ಥಿ, ಶಿಕ್ಷಕ ಮತ್ತು ಪೋಷಕರು ಮೂವರ ಸಹಭಾಗಿತ್ವ ಅಗತ್ಯವಾಗಿದೆ. ಪ್ರತಿಯೊಬ್ಬರ ಪಾತ್ರವೂ ಮಹತ್ವದ್ದಾಗಿದೆ.

**ವಿದ್ಯಾರ್ಥಿಯ ಪಾತ್ರ**

1. ಕನ್ನಡ ಭಾಷೆಯನ್ನು ಕಲಿಯುವಲ್ಲಿ ಆಸಕ್ತಿ ಮತ್ತು ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು.
2. ಪ್ರತಿದಿನ ಕನ್ನಡ ಪುಸ್ತಕಗಳು, ಪತ್ರಿಕೆಗಳು, ಕಥೆಗಳು ಮತ್ತು ಲೇಖನಗಳನ್ನು ಓದುವ ಅಭ್ಯಾಸ ಮಾಡಬೇಕು.
3. ಹೊಸ ಪದಗಳನ್ನು ಕಲಿತು ಅವುಗಳನ್ನು ಮಾತು ಮತ್ತು ಬರವಣಿಗೆಯಲ್ಲಿ ಬಳಸಬೇಕು.
4. ಕನ್ನಡದಲ್ಲಿ ಮಾತನಾಡಲು ಮತ್ತು ಅಭಿಪ್ರಾಯ ವ್ಯಕ್ತಪಡಿಸಲು ಪ್ರಯತ್ನಿಸಬೇಕು.
5. ಶಿಕ್ಷಕರು ನೀಡುವ ಭಾಷಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.
6. ವ್ಯಾಕರಣ ಮತ್ತು ಬರವಣಿಗೆಯ ಕೌಶಲಗಳನ್ನು ನಿರಂತರ ಅಭ್ಯಾಸ ಮಾಡಬೇಕು.

**ಶಿಕ್ಷಕರ ಪಾತ್ರ**

1. ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಆಸಕ್ತಿ ಮೂಡಿಸುವಂತೆ ಬೋಧಿಸಬೇಕು.
2. ಸರಳ, ಸೃಜನಾತ್ಮಕ ಮತ್ತು ವಿದ್ಯಾರ್ಥಿ-ಕೇಂದ್ರಿತ ಬೋಧನಾ ವಿಧಾನಗಳನ್ನು ಬಳಸಬೇಕು.
3. ಕಥೆ, ಕವಿತೆ, ನಾಟಕ, ಚರ್ಚೆ, ಭಾಷಾ ಆಟಗಳು ಮುಂತಾದ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಆಕರ್ಷಕಗೊಳಿಸಬೇಕು.
4. ವಿದ್ಯಾರ್ಥಿಗಳ ಭಾಷಾ ದೋಷಗಳನ್ನು ತಿದ್ದಿ ಸರಿಯಾದ ಮಾರ್ಗದರ್ಶನ ನೀಡಬೇಕು.
5. ಓದುವಿಕೆ, ಬರವಣಿಗೆ, ಕೇಳುವಿಕೆ ಮತ್ತು ಮಾತನಾಡುವಿಕೆ ಕೌಶಲಗಳನ್ನು ಸಮಾನವಾಗಿ ಅಭಿವೃದ್ಧಿಪಡಿಸಬೇಕು.
6. ತಂತ್ರಜ್ಞಾನ ಮತ್ತು ಡಿಜಿಟಲ್ ಸಂಪನ್ಮೂಲಗಳನ್ನು ಬಳಸಿ ಪರಿಣಾಮಕಾರಿ ಕಲಿಕೆಗೆ ಅವಕಾಶ ಕಲ್ಪಿಸಬೇಕು.



**ಪ್ರಭುಸ್ವಾಮಿ.ಬಿ**
**ಕನ್ನಡ ಉಪನ್ಯಾಸಕರು**
**ವಿದ್ಯಾ ಸಂಸ್ಕಾರ್ ಪದವಿ ಪೂರ್ವ ಕಾಲೇಜು, ಬೆಂಗಳೂರು**

# Top Achievers of Commerce

## II PUC Unit Test 01 May- 2026



Lavanya D H
97.45%



Nithya K G
95.42%



Lakshitha V
94.58%



R Munirathna
94.58%



Raksha V Kumar
94.47%



Prajwal R
93.19%



Inchara S
92.92%



Yashaswini Earla
92.34%



Nithin G
91.91%



Monisha L
90.64%



Bhuvana H
90.42%



Yogesh G S
90.21%

# Top Achievers of Science

## II PUC Unit Test 01 May- 2026



*Jeevitha C H*
*97.78%*



*Jasmitha C J*
*95.56%*



*DhanyathaAradhya.N*
*93.33%*



*Inchara S*
*92.89%*



*Pooja C*
*91.56%*

# Gallery- The Frames of Glory...


















UPASANA VSPUC

# Gallery- The Frames of Glory...



































# Gallery- The Frames of Glory...



























VOLUME - 02 | ISSUE - 01 | JUNE 2026

# Contact Us

Vidya Sanskaar Pre-University College
Machohalli Gate, Magadi Main Road, Bengaluru-91

We Welcome Your Suggestions!
Have feedback, ideas, or suggestions for the next volume?
Feel free to reach out to us at:

Phone: 080-35612881 to 99 (19 lines)

E-mail: upasana@vidyasanskaar.edu.in